# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ 590 018, ಕರ್ನಾಟಕ ರಾಜ್ಯ.

ಡಾ|| ಹೆಚ್. ಎನ್. ಜಗನ್ನಾಥ ರೆಡ್ಡಿ
ಕುಲಸಚಿವರು

ದೂರವಾಣಿ ಸಂ: (0831) - 2405468
ಫ್ಯಾಕ್ಸ್ ಸಂ : (0831) - 2405467


ಸಂ. :ವಿತಾವಿ/ಡಿಪಿಎಆರ್/VT-52/2016-17/2304 ದಿನಾಂಕ 24 FEB 2018

## :ಸುತ್ತೋಲೆ:

ವಿಷಯ: ದಿನಾಂಕ 31-03-2018 ರಂದು ವಿತಾವಿಯ ಕಛೇರಿಗಳಿಗೆ ರಜೆಯನ್ನು ಘೋಷಿಸಿ ಬದಲಿಗೆ ದಿನಾಂಕ 10-03-2018 ರಂದು ವಿತಾವಿ ಕಛೇರಿಗಳಿಗೆ ಕರ್ತವ್ಯದ ದಿನವೆಂದು ಘೋಷಿಸುವುದರ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳು ಕಂಡಿಕೆ (109)ರಲ್ಲಿ ಅನುಮೋದನೆ ದಿನಾಂಕ 24-02-2018

2018ನೇ ಮಾರ್ಚ/ಏಪ್ರೀಲ್ ತಿಂಗಳಿನಲ್ಲಿ ದಿನಾಂಕ 29-03-2018, 30-03-2018 ಮತ್ತು ದಿನಾಂಕ 01-04-2018 ರಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕಛೇರಿಗಳಿಗೆ ರಜೆ ಇದ್ದು, ದಿನಾಂಕ 31-03-2018ರಂದು ಕರ್ತವ್ಯದ ದಿನ ಇರುತ್ತದೆ. ಆದ್ದರಿಂದ, ವಿತಾವಿಯ ಸಿಬ್ಬಂದಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಪ್ರಧಾನ ಕಛೇರಿಯನ್ನೊಳಗೊಂಡಂತೆ, ಪ್ರಾದೇಶಿಕ ಕಚೇರಿಯ ಆವರಣದಲ್ಲಿರುವ ಎಲ್ಲ ಕಚೇರಿಗಳಿಗೆ, ಸ್ನಾತಕೋತ್ತರ ಕೇಂದ್ರಗಳಿಗೆ ಹಾಗೂ ವಿತಾವಿ ಘಟಕ ಕಾಲೇಜು ಯುಬಿಡಿಟಿ ಇಂಜನಿಯರಿಂಗ್ ಕಾಲೇಜ್‌ಗೆ **ದಿನಾಂಕ 31-03-2018 ರಂದು ರಜೆ ಘೋಷಿಸಿ**, ಈ ದಿನದ ಬದಲಾಗಿ ಎರಡನೇ ಶನಿವಾರ **ದಿನಾಂಕ 10-03-2018** ರಂದು ಕರ್ತವ್ಯದ ದಿನವೆಂದು ಘೋಷಿಸಲಾಗಿದೆ.

ವಿಶ್ವವಿದ್ಯಾಲಯದ ಎಲ್ಲ ವಿಭಾಗದ ಮುಖ್ಯಸ್ಥರು ಈ ಸುತ್ತೋಲೆಯನ್ನು ತಮ್ಮ ವಿಭಾಗದ ಸಿಬ್ಬಂದಿ ವರ್ಗದವರೆಲ್ಲರ ಗಮನಕ್ಕೆ ತರಬೇಕಾಗಿ ಸೂಚಿಸಲಾಗಿದೆ.

24/02/18
ಕುಲಸಚಿವರು

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ಕುಲಸಚಿವರು, ಆಡಳಿತ ವಿಭಾಗ, ವಿತಾವಿ ಬೆಳಗಾವಿ.
3. ಕುಲಸಚಿವರು (ಮೌಲ್ಯಮಾಪನ), ಪರೀಕ್ಷಾ ವಿಭಾಗ, ವಿತಾವಿ ಬೆಳಗಾವಿ.
4. ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ವಿತಾವಿ ಬೆಳಗಾವಿ.
5. ಪ್ರಾಚಾರ್ಯರು, ಯುಬಿಡಿಟಿ ಇಂಜನಿಯರಿಂಗ್ ಕಾಲೇಜ್, ದಾವಣಗೆರೆ.
6. ಪ್ರಾದೇಶಿಕ ನಿರ್ದೇಶಕರು, ವಿತಾವಿ ಪ್ರಾದೇಶಿಕ ಕಚೇರಿಗಳಾದ ಬೆಳಗಾವಿ, ಬೆಂಗಳೂರು, ಮೈಸೂರು ಮತ್ತು ಕಲಬುರಗಿ, ಇವರಿಗೆ ತಮ್ಮ ಪ್ರಾದೇಶಿಕ ಕಛೇರಿಯ ಅಧೀನದಲ್ಲಿರುವ ಎಲ್ಲ ವಿಭಾಗಗಳ ಮುಖ್ಯಸ್ಥರ ಗಮನಕ್ಕೆ ತರಲು ಸೂಚಿಸಲಾಗಿದೆ.
7. ಸಂಯೋಜನಾಧಿಕಾರಿಗಳು, ವಿತಾವಿ ಸ್ನಾತಕೋತ್ತರ ಕೇಂದ್ರಗಳಾದ ಬೆಳಗಾವಿ, ಮುದ್ದೇನಹಳ್ಳಿ, ಮೈಸೂರು ಮತ್ತು ಕಲಬುರಗಿ ಇವರಿಗೆ.
8. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಧಾನ ಕಛೇರಿಯ ಆವರಣದಲ್ಲಿರುವ ಎಲ್ಲಾ ಕಛೇರಿಗಳ ಮುಖ್ಯಸ್ಥರುಗಳಿಗೆ.
9. ವಿಶೇಷಾಧಿಕಾರಿಗಳು, ಸಿ.ಎನ್.ಸಿ., ವಿತಾವಿ ಬೆಳಗಾವಿ ಇವರಿಗೆ ಸದರಿ ಸುತ್ತೋಲೆಯನ್ನು ವಿತಾವಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.